ಓ ಎಸ್ ನಂ.118/2024

ಪಿ.ಡಬ್ಲ್ಯೂ-1 ಬಸವರಾಜ ತಂದೆ ಸಿದ್ದಪ್ಪ ಬಿರಾದಾರ

**(ಇಂದು ದಿನಾಂಕಃ 07-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

<u>ಪಾಟೀ ಸವಾಲುಃ ಶ್ರೀ ಎಸ್ ಕೆ ಪಿ ವಕೀಲರಿಂದ.</u>

ದಾವಾ ಆಸ್ತಿಯ ಸರ್ವೆ ನಂಬರಗಳು ನನಗೆ ಗೊತ್ತು. ಸರ್ವೆ ನಂಬರ ೩೪೪/೩, ಸರ್ವೆ ನಂಬರ ೯೭/*, ಪ್ಲಾಟ ನಂಬರ ೬/೮೨, ಸರ್ವೆ ನಂಬರ ೩೭೫/೪ ಇವು ದಾವಾ ಜಮೀನುಗಳಾಗಿರುತ್ತವೆ. ದಾವಾ ಜಮೀನುಗಳ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಮನೆಯ ಅಳತೆ ಗೊತ್ತು, ಅದು ಪೂರ್ವ-ಪಶ್ಚಿಮ ೯ ಅಡಿ ಮತ್ತು ಉತ್ತರ-ದಕ್ಷಿಣ ೨೦ ಅಡಿ ಇರುತ್ತದೆ.

೨. ನಮ್ಮ ತಂದೆ ಸಿದ್ದಪ್ಪನು ದಿನಾಂಕ 13-04-2017 ರಂದು ಮೃತರಾಗಿರುತ್ತಾರೆ. ನಮ್ಮ ತಂದೆ ಸಿದ್ದಪ್ಪನು ಮೃತರಾಗುವ ಮೊದಲು ನನ್ನ ಹೆಸರಿನಲ್ಲಿ ಒಂದು ಜಮೀನು ಮಾಡಿದ್ದರು ಎಂದರೆ ಸರಿ. ೧೯೯೦ ರಲ್ಲಿ ನನಗೆ ಜಮೀನು ನಮ್ಮ ತಂದೆ ಪಾಲು ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಸಾಕ್ಷಿದಾರರ ಸಮಕ್ಷಮ ದಾಖಲೆ ಕೂಡಾ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದು ಖೊಟ್ಟಿ ದಾಖಲೆ ಆಗಿರುತ್ತದೆ ಎನ್ನುತ್ತಾರೆ. ನಮ್ಮ ತಂದೆ ಜೀವಿತಾ ಇದ್ದಾಗಲೆ ೨ನೇ ಪ್ರತಿವಾದಿ ಶಂಕರಲಿಂಗರವರಿಗೆ ಜಮೀನು ನೀಡಿರುತ್ತಾರೆ ಎಂದರೆ ಸರಿ. ನನಗೆ ಜಮೀನು ಪಾಲು ನೀಡಿದ ನಂತರ ಸರ್ವೆ ನಂಬರ ೩೪೪/೩ ರ ಜಮೀನನ್ನು ಖರೀದಿ ಮಾಡಲಾಗಿದೆ ಎಂದರೆ ಸರಿ. ಸರ್ವೆ ನಂಬರ ೩೪೪/೩ ರ ೫ ಎಕರೆ ಜಮೀನನ್ನು ನನ್ನ ದಾವೆಯಲ್ಲಿ ೨ ಬಾರಿ ತೋರಿಸಿರುತ್ತೇವೆ ಎಂದರೆ ಸರಿ.

೩. ನಮ್ಮ ತಾಯಿ ಪಾರ್ವತಮ್ಮರವರಿಗೆ ನಾನು ಒಬ್ಬನೆ ಮಗ ಇರುತ್ತೇನೆ. ನನಗೆ ಸಹೋದರಿಯರು ಇರುವುದಿಲ್ಲ. ನಮ್ಮ ತಾಯಿ ಈಗ ಮೃತರಾಗಿರುತ್ತಾರೆ. ನಮ್ಮ ತಾಯಿ ಮೃತರಾದ ನಂತರ ನಮ್ಮ ತಂದೆ ೧ನೇ ಪ್ರತಿವಾದಿಯನ್ನು ೧೯೭೮-೭೯ ರಲ್ಲಿ ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ ೯೭ ರ ೭ ಎಕರೆ ೩೨ ಗುಂಟೆ ಜಮೀನನ್ನು ನಮ್ಮ ತಂದೆ ಖರೀದಿಸಿರುತ್ತಾರೆ. ಆ ಕುರಿತು ಖರೀದಿ ಪತ್ರದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

೪. ೧ನೇ ಪ್ರತಿವಾದಿ ಯಾವುದೇ ದಾಖಲೆ ಇಲ್ಲದೆ ತಮ್ಮ ಹೆಸರಿನಲ್ಲಿ ಜಮೀನು ಮಾಡಿಕೊಂಡಿರುತ್ತಾರೆ. ಸರ್ವೆ ನಂಬರ ೩೪೪/೩ ರ ೫ ಎಕರೆ ಜಮೀನಿನ ಖರೀದಿ ಪತ್ರ ೩ನೇ ಪ್ರತಿವಾದಿರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿಯು ಅವನು ಖರೀದಿ ಸಮಯದಲ್ಲಿ ಅಪ್ರಾಪ್ತನಾಗಿದ್ದ ಎನ್ನುತ್ತಾರೆ. ಸರ್ವೆ ನಂಬರ ೯೭ ರ ೭ ಎಕರೆ ೩೨ ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇರುವುದಿಲ್ಲ. ಮನೆ ನಂಬರ ೬/೮೨ ರ ೯ ಇಂಟು ೨೦ ಮನೆ ಈಗಲೂ ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ.

೫. ಸರ್ವೆ ನಂಬರ ೩೭೫/೪ ರ ೨ ಎಕರೆ ೧೫ ಗುಂಟೆ ಜಮೀನು ಮತ್ತು ಮನೆ ಆಸ್ತಿಗಳಲ್ಲಿ ನಾನು ಪಾಲು ಕೇಳಿಲ್ಲ ಎಂದರೆ ಸಾಕ್ಷಿಯು ಜಮೀನು ನನ್ನ ಹೆಸರಿನಲ್ಲಿ ಇರುವುದರಿಂದ ನಾನು ಅದರಲ್ಲಿ ಪಾಲು ಕೇಳಿಲ್ಲ ಎನ್ನುತ್ತಾರೆ. ನಾನು ಈಗ ಸುಮಾರು ೪೦ ವರ್ಷಗಳಿಂದ ಹುಬ್ಬಳ್ಳಿಯಲ್ಲಿ ವಾಸವಿರುತ್ತೇನೆ. ಸರ್ವೆ ನಂಬರ ೩೭೫/೪ ರ ಜಮೀನು ಮತ್ತು ಮನೆಯನ್ನು ನನಗೆ ಈಗಾಗಲೆ ಪಾಲಿನಲ್ಲಿ ನೀಡಿರುತ್ತಾರೆ. ಆದ್ದರಿಂದ ಅದರಲ್ಲಿ ಪಾಲು ಮಾಡುವುದು ಬೇಕಾಗಿಲ್ಲ.

೬. ಸರ್ವೆ ನಂಬರ ೩೭೫/೪ ರ ಜಮೀನೂ ಕೂಡಾ ಹಿರಿಯರಿಂದ ಬಂದ ಜಮೀನು ಎಂದರೆ ಸರಿ. ಸರ್ವೆ ನಂಬರ ೩೭೫/೪ ರ ಜಮೀನು ನಾನು ಕೇಳಿದ್ದರಿಂದ ಪಾಲು ಮಾಡಿ, ನನಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನನಗೆ ಜಮೀನು ನೀಡುವ ಮೊದಲು ೨ನೇ ಪ್ರತಿವಾದಿ ಕೂಡಾ ನಮ್ಮ ತಂದೆ ೨ ಎಕರೆ ೩೩ ಗುಂಟೆ ಜಮೀನು ನೀಡಿರುತ್ತಾರೆ ಆದರೆ ಅದು ಹೇಗೆ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪಿಯುಸಿವರೆಗೆ ಓದಿರುತ್ತೇನೆ. ನಾನು ಕನ್ನಡದಲ್ಲಿ ಸಹಿ ಮಾಡುತ್ತೇನೆ. ನಮ್ಮ ತಂದೆ ಮೃತರಾದ ನಂತರ ನಾನು ೨ ಎಕರೆ ೧೫ ಗುಂಟೆ ಜಮೀನು ಸಾಗುವಳಿ ಮಾಡುತ್ತಿದ್ದೇನೆ. ೨ನೇ ಪ್ರತಿವಾದಿ ೨ ಎಕರೆ ೩೩ ಗುಂಟೆ ಜಮೀನು ಮತ್ತು ಬಡದಾಳ ಗ್ರಾಮದ ೫ ಎಕರೆ ಜಮೀನು ಸಾಗುವಳಿ ಮಾಡುತ್ತಿದ್ದಾನೆ. ನಾನು ಎಷ್ಟು ವರ್ಷ ವಯಸ್ಸಿನವನಿದ್ದಾಗ ಹುಬ್ಬಳ್ಳಿಗೆ ಹೋಗಿರುತ್ತೇನೆ ಎಂದು ಹೇಳಲು ಆಗುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.